**ಕರ್ನಾಟಕ ಸರ್ಕಾರ**

ಸಂ: ಉತಇ/ತ/ಖರೀದಿ–5/ವಿಲೇ ವಿವ–05/2009–10

**ಆಯುಕ್ತರ ಕಛೇರಿ,**
ಉದ್ಯೋಗ ಮತ್ತು ತರಬೇತಿ ಇಲಾಖೆ,
ಕೌಶಲ್ಯ ಭವನ. ಡೈರಿ ಸರ್ಕಲ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029.
**ದಿನಾಂಕ: 11–06–2009.**

## <u>ಸುತ್ತೋಲೆ</u>

ವಿಷಯ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇರುವ ಅನುಪಯುಕ್ತ ವಾಹನಗಳ ವಿಲೇವಾರಿ ಮಾಡುವ ಬಗ್ಗೆ

ಉಲ್ಲೇಖ: ಕರ್ನಾಟಕ ಸರ್ಕಾರದ ಸಚಿವಾಲಯ ರವರ ಪತ್ರದ ಸಂಖ್ಯೆ: ಸಿಆಸುಇ/63/ಶಿವಾನೀ/2009 ದಿ: 04–05–2009

* * *

ಮೇಲಿನ ವಿಷಯಕ್ಕೆ ಸಂಭಂದಿಸಿದಂತೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹಳೆಯ ಅನುಪಯುಕ್ತ ವಾಹನಗಳ ವಿಲೇವಾರಿ ಮಾಡಲು ರಚಿಸಿರುವ ಸಮಿತಿ ಹಾಗೂ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಸರ್ಕಾರ ಸುತ್ತೋಲೆಯನ್ನು ಹೊರಡಿಸಿರುವುದರಿಂದ ಲಗತ್ತಿಸಿರುವ ಸುತ್ತೋಲೆಯನುಸಾರ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು (ತರಬೇತಿ)
ಉದ್ಯೋಗ ಮತ್ತು ತರಬೇತಿ

ಗೆ,

ಪ್ರಾಚಾರ್ಯರು,
ಸರ್ಕಾರಿ ಕೈಗಾರಿಕಾ ತರಬೇತಿ ಇಲಾಖೆ,
<u>ಯಲಬುರ್ಗಾ.</u>

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 63 ಶಿವಾಸೀ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 04.05.2009.

## ಸುತ್ತೋಲೆ

ವಿಷಯ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇರುವ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 142 ಶಿವಾಸೀ 2000, ದಿನಾಂಕ 05.02.3002.

---

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹಳೆಯ ಅನುಪಯುಕ್ತ ವಾಹನಗಳ ವಿಲೇವಾರಿಗೆ ಸಂಬಂಧಿಸಿದಂತೆ ಹಾಗೂ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬವನ್ನು ನಿವಾರಿಸಲು ಈ ಕೆಳಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ.

1) ಇಲಾಖಾ ಮುಖ್ಯಸ್ಥರ ನೇರ ಆಡಳಿತ ಹತೋಟಿಯಲ್ಲಿರುವ ವಾಹನಗಳ ವಿಲೇವಾರಿಯನ್ನು ಆಯಾಯ ಇಲಾಖಾ ಮುಖ್ಯಸ್ಥರೇ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೂಲಕ ವಾಹನಗಳ ಮೌಲ್ಯಮಾಪನ ಮಾಡಿಸಿ ಹಾಗೂ ಅಂತಹ ವಾಹನಗಳನ್ನು ಅನುಪಯುಕ್ತವೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಯಾವ ವಿಳಂಬವಾಗದಂತೆ ಟೆಂಡರ್–ಕಂ–ಹರಾಜಿನ ಮುಖಾಂತರ ವಿಲೇವಾರಿ ಮಾಡತಕ್ಕದ್ದು. ಆ ರೀತಿ ಇಲಾಖಾ ಮುಖ್ಯಸ್ಥರು ಮಾಡುವ ಟೆಂಡರ್–ಕಂ–ಹರಾಜುಗಳನ್ನು ದೃಢೀಕರಣ ಮಾಡಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

2) ಜಿಲ್ಲಾ, ಉಪ ವಿಭಾಗ, ತಾಲ್ಲೂಕು ಮಟ್ಟದಲ್ಲಿರುವ ವಿವಿಧ ಇಲಾಖೆಗಳಿಗೆ ಸೇರಿದ ಎಲ್ಲಾ ಅನುಪಯುಕ್ತ ಹಳೆಯ ವಾಹನಗಳನ್ನು ಯಾವ ವಿಳಂಬವಿಲ್ಲದೆ ತ್ವರಿತವಾಗಿ ವಿಲೇವಾರಿ ಮಾಡಿಸುವುದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಸರ್ಕಾರವು ಈ ಕೆಳಕಂಡ ಸಮಿತಿಯನ್ನು ರಚಿಸಿದೆ.

| | |
|---|---|
| 1. ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಸದಸ್ಯರು |
| 3. ಪೋಲೀಸ್ ಸೂಪರಿಂಟೆಂಡೆಂಟ್ | ಸದಸ್ಯರು |
| 4. ಪ್ರಾದೇಶಿಕ ಸಾರಿಗೆ ಅಧಿಕಾರಿ | ಸದಸ್ಯರು |

-

2. ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನ್ವಯ ಹಳೆಯ ಅನುಪಯುಕ್ತ ವಾಹನಗಳನ್ನು ಪರಿಶೀಲಿಸಿ ನಿಯಮಾವಳಿ ರೀತ್ಯ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಲು ಹಾಗೂ ಟೆಂಡರ್–ಕಂ–ಹರಾಜಿನ ದೃಢೀಕರಿಸುವ ಅಧಿಕಾರವನ್ನು ಸದರಿ ಸಮಿತಿಗೆ ಪ್ರತ್ಯಾಯೋಜಿಸಲಾಗಿದೆ.

3. ರಾಜ್ಯದ ಹಲವಾರು ಇಲಾಖೆಗಳಲ್ಲಿ ಮತ್ತು ನಿಗಮ/ಮಂಡಳಿಗಳಲ್ಲಿ ಹಲವಾರು ವರ್ಷಗಳಿಂದ ವಾಹನಗಳು ವಿವಿಧ ಕಛೇರಿಗಳ ಮುಂದೆ ನಿಲುಗಡೆಯಾಗಿ ತುಕ್ಕು ಹಿಡಿಯುತ್ತಿರುವುದು ಇದರಿಂದಾಗಿ ದಿನದಿಂದ ದಿನಕ್ಕೆ ಅವುಗಳ ಮೌಲ್ಯವು ಕಳೆದುಕೊಳ್ಳಲಿದೆ. ಇದರಿಂದ ಸರ್ಕಾರಕ್ಕೆ ಅಪಾರ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಅನುಪಯುಕ್ತ ವಾಹನಗಳನ್ನು ಕೂಡಲೇ ಗುರುತಿಸಿ ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಮಾರ್ಗಸೂಚಿಯಂತೆ ನಿಯಮಾನುಸಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಮೌಲ್ಯಮಾಪನ ಮಾಡಿಸಿ ನಿಯಮಾನುಸಾರ ಟೆಂಡರ್–ಕಂ–ಹರಾಜಿನ ಮೂಲಕ ವಿಲೇವಾರಿ ಮಾಡಲು ಶೀಘ್ರ ಕ್ರಮ ಕೈಗೊಳ್ಳುವಂತೆ ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ.

4. ಟೆಂಡರ್–ಕಂ–ಹರಾಜಿನ ಮೂಲಕ ವಾಹನ ವಿಲೇವಾರಿಯಿಂದ ಸ್ವೀಕೃತವಾಗುವ ಮೊಬಲಗನ್ನು (ರಾಜಸ್ವ) ಆಯಾಯ ಇಲಾಖೆಗಳ ಸ್ವೀಕೃತಿಗೆ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆ (ರೆಸಿಪ್ಟ್ ಹೆಡ್ ಆಫ್ ಅಕೌಂಟ್) ಗೆ ಜಮಾ ಮಾಡತಕ್ಕದ್ದು.

5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಆಡಳಿತ ವ್ಯಾಪ್ತಿಗೆ ಬರುವ ಇಲಾಖೆಗಳ ಮುಖ್ಯಸ್ಥರುಗಳಿಗೆ ಹಾಗೂ ನಿಗಮ/ಮಂಡಳಿಯ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಈ ಬಗ್ಗೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡಲು ಸಹ ಕೋರಿದೆ.

(ಎಸ್.ತಿಪ್ಪೇಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ. ಆ. ಸು. ಇಲಾಖೆ(ರಾಜ್ಯ ಶಿಷ್ಟಾಚಾರ).

ಇವರಿಗೆ:

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು
2. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನಂ. 10, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ.
3. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ / ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
6. ಸಾರಿಗೆ ಆಯುಕ್ತರು, ಬೆಂಗಳೂರು.
7. ರಿಜಿಸ್ಟ್ರಾರ್ ಜನರಲ್‌ರವರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು–1
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ
9. ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
10. ಎಲ್ಲಾ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್.
11. ವಿಶೇಷಾಧಿಕಾರಿಗಳು, ರಾಜ್ಯ ಅತಿಥೇಯ ಸಂಸ್ಥೆ, ಕುಮಾರ ಕೃಪ ಅತಿಥಿ ಗೃಹ, ಹೈ ಗ್ರೌಂಡ್ಸ್, ಬೆಂಗಳೂರು–1
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.